ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿ.ಪ.ಸಂಖ್ಯೆ.202/ 1995ರ ದಿನಾಂಕ: 12/12/1996 ರ ಆದೇಶದ ಪ್ರಕಾರ ಮತ್ತು ಅರಣ್ಯ ಸಂರಕ್ಷಣಾ ಕಾಯಿದೆ–1980ರ ಹಾಗೂ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮಗಳ ಪ್ರಕಾರ ಮತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ನೀಡಿರುವ ಆದೇಶಗಳಂತೆ ಅರಣ್ಯ ಭೂಮಿಯಲ್ಲಿ ಅನಧಿಕೃತವಾಗಿ ಆಗಿರುವಂತಹ ಒತ್ತುವರಿಗಳನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

**ಕಿರುಜಲ ವಿದ್ಯುತ್ ಯೋಜನೆಗಳು**

**562 (614) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :** ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವ್ಯಾಪ್ತಿಯಲ್ಲಿರುವ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಸರ್ಕಾರ ಅನುಮತಿ ನೀಡಿರುವ ಕಿರುಜಲ ವಿದ್ಯುತ್ ಯೋಜನೆಗಳ ಸಂಖ್ಯೆ ಮತ್ತು ಅವುಗಳಿಗೆ ನೀಡಲಾಗಿರುವ ಅರಣ್ಯ ಭೂಮಿಯ ವಿಸ್ತೀರ್ಣದ ವಿವರ ನೀಡುವುದು;

ಆ) ಕಿರುಜಲ ವಿದ್ಯುತ್ ಯೋಜನೆ ಅನುಷ್ಠಾನಗೊಳಿಸಲು ಪರವಾನಿಗೆ ನೀಡಿರುವ ಸಂಸ್ಥೆಗಳ ವಿವರ ನೀಡುವುದು;

ಇ) ಕಾನೂನಿನ ಅನ್ವಯ ಅನುಮತಿ, ನಿಯಮ ನಿರ್ಬಂಧನೆಗಳನ್ನು ಅನುಸರಿಸದೆ ಕ್ರಿಯಾಶೀಲವಾಗಿರುವ ಎಷ್ಟು ಪ್ರಕರಣಗಳನ್ನು ಇಲಾಖೆಯು ಗುರುತಿಸಿ ಕ್ರಮ ಜರುಗಿಸಿದೆ; ಆ ಕುರಿತ ವಿವರ ನೀಡುವುದು;

**ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) :**

ಅ) ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಸರ್ಕಾರ ಅನುಮತಿ ನೀಡಿರುವ ಕಿರುಜಲ ವಿದ್ಯುತ್ ಯೋಜನೆಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ಪರವಾನಿಗೆ ನೀಡಿರುವ ಸಂಸ್ಥೆಗಳ ವಿವರ ಮೇಲ್ಕಂಡ ಅನುಬಂಧದಲ್ಲಿ ತಿಳಿಸಿರುವಂತೆ ಇರುತ್ತದೆ.

ಇ) **ಹಾಸನ ವೃತ್ತ :** ಹಾಸನ ಅರಣ್ಯ ವಿಭಾಗದಲ್ಲಿ ಹೊಂಗದಹಳ್ಳ ಕಿರುಜಲ ವಿದ್ಯುತ್ ಯೋಜನೆ ಹಾಗೂ ಯಡಕುಮಾರಿ ಕಿರುಜಲ ವಿದ್ಯುತ್ ಯೋಜನೆಗಳಲ್ಲಿ ಉಪಯೋಗಿ ಸಂಸ್ಥೆಯವರು ಕರಾರು ನಿಯಮಗಳನ್ನು

ಉಲ್ಲಂಘಿಸಿದ್ದು ಯೋಜನಾ ಕಾಮಗಾರಿಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ಸದರಿ ಯೋಜನೆಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ. 10980/2010 ಹಾಗೂ ರಿಟ್ ಅರ್ಜಿ ಸಂಖ್ಯೆ:9330/2010 (ಜಿಎಮ್ ಪಿಐಎಲ್) ಪ್ರಕರಣ ದಾಕಲಾಗಿದ್ದು ವಿಚಾರಣೆ ಪ್ರಗತಿಯಲ್ಲಿರುತ್ತದೆ ಹಾಗೂ ನಾಗರ್ಜುನ ಕಿರುಜಲ ವಿದ್ಯುತ್ ಯೋಜನೆಯಲ್ಲಿ ಪ್ರಸ್ತಾವನೆಗೆ ಸೇರ್ಪಡೆ ಮಾಡದೇ 1.5 ಕೀ.ಮೀ ಉದ್ದ ಭೂಗತ ಸುರಂಗ ಮಾರ್ಗವನ್ನು ಮಾಡಲಾಗಿದ್ದು, ಈ ಸಂಬಂಧ ಹೆಚ್ಚುವರಿಯಾಗಿ ಉಪಯೋಗಿಸಲ್ಪಟ್ಟ ಅರಣ್ಯ ಪ್ರದೇಶಕ್ಕೆ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯುವ ಸಲುವಾಗಿ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ಉಪಯೋಗಿ ಸಂಸ್ಥೆಯವರಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಪತ್ರ ಸಂಖ್ಯೆ:ಎ5(2) ಜಿಎಫ್ಎಲ್.ಸಿಆರ್–04/2006–07 ದಿನಾಂಕ:20–7–2012 ರಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

**ಮೈಸೂರು ವೃತ್ತ :** ಮೆ॥ ಲಿಂಬಾವಳಿ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿ, ಬೆಂಗಳೂರು ಇವರಿಗೆ ಕಿರುಜಲ ವಿದ್ಯುತ್ ಉತ್ಪಾದನೆ ಘಟಕ ಸ್ಥಾಪಿಸಲು ಜಿಲ್ಲಾಧಿಕಾರಿ, ಮಂಡ್ಯರವರು ಮಂಡ್ಯ ವಿಭಾಗದ ಮಳವಳ್ಳಿ ವಲಯದ ಧನಗೂರು ರಕ್ಷಿತ ಅರಣ್ಯ ಪ್ರದೇಶವನ್ನು ಕರಾಬು ಜಮೀನೆಂದು ಪರಿಗಣಿಸಿ ಅನುಮತಿ ನೀಡಲಾಗಿದ್ದು, ಆದರೆ ಪ್ರಸ್ತುತ ಪ್ರದೇಶವು ಅರಣ್ಯ ಪ್ರದೇಶವಾಗಿದ್ದ ಕಾರಣ ಈ ಬಗ್ಗೆ ಅರಣ್ಯ ಮೊಕದ್ದಮೆ ಸಂಖ್ಯೆ:1/12–13 ದಿನಾಂಕ: 17–4–2012 ರಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಈ ಸಂಬಂಧ ಕಾನೂನು ರೀತಿಯ ಕ್ರಮ ಜರುಗಿಸಲಾಗಿರುತ್ತದೆ.

**ಚಿಕ್ಕಮಗಳೂರು ವೃತ್ತ :** ಕೊಪ್ಪ ಅರಣ್ಯ ವಿಭಾಗದಲ್ಲಿ ಪೈಕೋ ಹೈಡ್ರೋ ಪವರ್ ಪ್ರಾಜೆಕ್ಟ್ ಯೋಜನೆಯ ಗುತ್ತಿಗೆ ಗೇಣಿ ಅವಧಿಯು ದಿನಾಂಕ: 9–10–2011ಕ್ಕೆ ಮುಕ್ತಾಯಗೊಂಡಿದ್ದು, ಗುತ್ತಿಗೆ ನವೀಕರಣಕ್ಕೆ ಉಪಯೋಗಿ ಸಂಸ್ಥೆಯಿಂದ ಪ್ರಸ್ತಾವನೆ ಸಲ್ಲಿಸದ ಕಾರಣ ಕಾರ್ಯ ಚಟುವಟಿಕೆಗಳನ್ನು ನಿಲ್ಲಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಪತ್ರ ಸಂಖ್ಯೆ:ಎ5(4) ಜಿಎಫ್ಎಲ್. ಸಿಆರ್–12/2000–01 ದಿನಾಂಕ: 28–6–2012 ರಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

**ಮಂಗಳೂರು ವೃತ್ತ :**

ಮಂಗಳೂರು ವಿಭಾಗದ ಉಪ್ಪಿನಂಗಡಿ ವಲಯದ ಅರಣ್ಯೇತರ ಪ್ರದೇಶದಲ್ಲಿ ಮೆ॥ ಸಾಗರ್ ಪವರ್ (ನೀರುಕಟ್ಟೆ) ಪ್ರೈ.ಲಿ. ಬೆಂಗಳೂರು ಇವರಿಂದ ಕಿರುಜಲ ವಿದ್ಯುತ್ ಯೋಜನೆ ಅನುಷ್ಠಾನಗೊಂಡ ಕಾರಣ 2.48 ಹೆ. ಅರಣ್ಯ ಪ್ರದೇಶವು ಮುಳುಗಡೆಯಾಗಿದ್ದು ಸದರಿ ಪ್ರದೇಶಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.

ಮೆ॥ ಸಾಗರ್ ಪವರ್ ಲಿಮಿಟೆಡ್, ಹೈದ್ರಾಬಾದ್‌ರವರು ಕೇಂದ್ರ ಸರ್ಕಾರದ ಅನುಮತಿ ಪಡೆಯದೇ ಧರ್ಮಸ್ಥಳ ಅರಣ್ಯ ಪ್ರದೇಶದ ದಾಂಡೇಲ ಎಂಬಲ್ಲಿ 2.386 ಹೆ. ಅರಣ್ಯ ಪ್ರದೇಶವನ್ನು ಕೆ.ವಿ ಲೈನ್‌ಗಾಗಿ ಉಪಯೋಗಿಸಲಾಗಿದ್ದು, ಈ ಸಂಬಂಧ ಅರಣ್ಯ ಮೊಕದ್ದಮೆ ಸಂಖ್ಯೆ. 17 ಮತ್ತು 18/2009–10 ರಂತೆ ಗುನ್ನೆಯನ್ನು ದಾಖಲಿಸಿಕೊಂಡಿದ್ದು, ಸದರಿ ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರಿಂದ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.

ಮೇಲ್ಕಂಡ ಎರಡು ಪ್ರಸ್ತಾವನೆಗಳು ಪಶ್ಚಿಮಘಟ್ಟ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಕಿರುಜಲ ವಿದ್ಯುತ್ ಯೋಜನೆಗೆ ಆಸ್ಪದವಿರುವುದಿಲ್ಲ.

| | ANNEXURE | | |
|---|---|---|---|
| Sl. No | Name of the Project | Division | Forest area diverted |
| 1 | Diversion of 4.90 ha. f/l for establishing Varahi tail race mini hydel station at Hosangadi, Kundapur in f/o M/s. Sandur Power Company Pvt. Ltd., Bangalore. | Kundapura | 4.9000 |
| 2 | Diversion of 3.63 ha. of f/l for establishing of 15 MW Mini Hydel scheme in f/o M/s.Bobba Power Project in Kundapura Dvn., DK Dist. | Kundapura | 3.6300 |
| 3 | Diversion of 4.20 ha. of deemed f/l for est. of 10.5 MW Mini Hydel Power Project across Puchamagru river at Mullibettu village DK Dist. in f/o M/s. Mount Kailash Power Project Private Limited. | Kundapura | 4.2000 |
| 4 | Diversion of 0.74 ha. of f/l at Horiyabbe for constn.of 12 MW Mini Hydel Scheme in f/o M/s. Shamili Hydel Power Project (P) Ltd., from the already diverted 129.60 ha. of f/l for Varahi Irrigation Project | Kundapura | 0.7400 |
| 5 | Diversion of 2.56 ha of forest land for Development of 15MW Mini Hydel Scheme in Sy. No.66 of Jarkala village, Karkala Tq, across Yennehole stream in Udupi dist., in favour of M/S GVP Infra Project Pvt. Ltd., Bangalroe. | Kundapura | 2.5600 |
| 6 | Diversion of 3.308 ha. of f/l for establishment of 9 MW Mini Hydel Project in f/o M/s. Bhoruka Power Corporation Ltd. | Mangalore | 3.3080 |
| 7 | Diversion of 1.53 ha of forest land for the purpose of small Hydro Project at Dharmastala forest on Dandella falls on Netravati River in favour of Sagar Power Ltd., Hydrabad | Mangalore | 1.5300 |
| 8 | Diversion of 2.00 ha.(revised 2.798 ha.) of f/l for Hydro Project, Charmady Kanapadi forest by M/s.Trinetra Energy Conservation Ltd., Mangalore | Mangalore | 2.7980 |
| 9 | Diversion of 4.500 ha.of forest land in Kemphole RF, Hassan for establishing 18 MW Mini Hydel Project in f/o M/s. International Power Corporation Ltd., B'lore. | Hassan | 4.5000 |
| 10 | Diversion of 4.10 ha. of f/l in Kemphole and Moorkamu gudda RF for establishment of 9 MW Kadumane Mini Hydel Scheme by M/s. Paschim Holdings Pvt. Ltd., Heggade (V) Sy.No.387 & 400 Kadumane (V) Sy:No.68. | Hassan | 4.1000 |
| 11 | Diversion of 4.521 ha of f/l in Heggade (v), Kemphole RF for establistment of 15mw Kadumane Mini Hydel Scheme II to M/s Nagarjuna Hydro Energy Pvt Ltd. | Hassan | 4.5210 |

| | | | |
|---|---|---|---|
| 12 | Diversion of 4.20 ha of forest land in Kagenari & Kanchanakumari RF in Sy. 1 & 16 of Yadakumari village Sakaleshpura Tq, Hassan dist. For establishment of 19.0MW Yadaku-mari Mini Hydel Project in favour of M/S.Maruti Power GEN (India) Pvt Ltd., Bangaore. | Hassan | 4.2000 |
| 13 | Diversion of 4.18 ha of forest land in Kagenari & Kanchanakumari RF in Sy. 1 & 16 of. Yadakumari village Sakaleshpura Tq, Hassan dist. For establishment of 18.90MW, Hongada halla, Mini Hydel Project in favour of M/S Maruti Power - GEN (India) Pvt Ltd., Bangaore. | Hassan | 4.1800 |
| 14 | Diversion of 3.144 ha. of f/l for establishing of 10 MW Manjadka Hydro Project in f/o M/s. Bhoruka Power Corporation Ltd., Bangalore. | Madikeri | 3.1440 |
| 15 | Diversion of 4.922 ha. of f/l for establishing 10.25 MW Mini Hydel Project in f/o M/s.Sai Spurthi Power Private Ltd., B'lore. | Ramanagara | 4.9220 |
| 16 | Diversion of 5.812 ha. f/l at Somanamardi Sy.No.129 of Deodurga Tq. Raichur Dist. For purpose of installing 12 MW Mini Hydel Power Plant at Narayanapura Right Bank Canal in f/o Narayanapura Power Company Ltd., | Raichur | 5.8120 |
| 17 | Diversion of 0.0174 ha. f/l for implementation of 4 KW Pico-Hydro Power Project, Chickmagalur Dist. In f/o Project Co-ordinator Technology Informatics Design Endeavour (TIDE), | Koppa | 0.0174 |
| 18 | Diversion of 1.70 ha. of f/l for establishment of 6 MW power generation across Somavathi river near Samsa (V), Chickmagalur Dist. In f/o M/s. SRM Power Private Ltd., B'lore. | Koppa | 1.7000 |
| 19 | Diversion of 8.75 ha. of f/l for construction of mini hydel project at MGHE Tail race at Jog in f/o Ambuthirtha Power Private Ltd., in Sy.No.151, 118 & 145. | Sagar (7.1 ha.) Sirsi (1.65) | 8.7500 |
| 20 | Diversion of 4.863 ha. of f/l in Ranganathaswamy Mini Hydel Project of Shivana samudram on Cauvery river in f/o M/s. Pioneer Power Corporation Limited. | Kollegal | 4.8630 |
| 21 | Diversion of 0.40 ha. of forest land in Sy.No.10 of Basapura Village, Chennagiri Taluk for the purpose of establishing of Mini Hydel Power Project in favour of M/s. Mrujaara power Plant. | Bhadravathi | 0.4000 |
| | **Total Extent** | | **74.7754** |